0103/0522

**First Semester Three Years LL.B./Fifth Semester Five Year B.A. LL.B./B.B.A. LL.B Examination, Dec. 2012**
**LAW OF TORTS AND CONSUMER LAW (Course – III)**

Duration : 3 Hours

Max. Marks : 100

**Instructions :** 1. Answer **all Units**.
ಎಲ್ಲಾ ಘಟಕಗಳಿಗೆ ಉತ್ತರಿಸತಕ್ಕದ್ದು.

2. Part **(a)** carries **15** marks and Part **(b)** carries **5** marks.
ಭಾಗ (ಅ) ಕ್ಕೆ 15 ಅಂಕಗಳು ಮತ್ತು ಭಾಗ (ಬ) ಕ್ಕೆ 5 ಅಂಕಗಳು.

**UNIT – I**

Q. No. 1. (a) "All torts are civil wrongs, but all civil wrongs are not torts". Justify the statement with leading cases. Marks :15

"ಎಲ್ಲಾ ಅಪಕೃತ್ಯಗಳು ದಿವಾನೀ ಅಕ್ರಮಗಳಾಗಿವೆ. ಆದರೆ ಎಲ್ಲಾ ದಿವಾನೀ ಅಕ್ರಮಗಳು ಅಪಕೃತ್ಯಗಳಲ್ಲ". ಈ ಹೇಳಿಕೆಯನ್ನು ಪ್ರಮುಖ ಪ್ರಕರಣಗಳೊಂದಿಗೆ ಸಮರ್ಥಿಸಿ.

OR/ಅಥವಾ

Define torts, Distinguish torts from contractual and criminal liability.

ಅಪಕೃತ್ಯವನ್ನು ವ್ಯಾಖ್ಯಾನಿಸಿ, ಅಪಕೃತ್ಯವನ್ನು ಒಪ್ಪಂದದ ಮತ್ತು ಅಪರಾಧದ ಹೊಣೆಗಾರಿಕೆಯಿಂದ ವ್ಯತ್ಯಾಸಿಸಿ.

(b) Short notes :

ಲಘು ಟಿಪ್ಪಣಿ :

Malice in fact and Malice in law. Marks : 5

ವಸ್ತುಸ್ಥಿತಿಯಲ್ಲಿ ದುರ್ಭಾವನೆ ಮತ್ತು ಕಾನೂನಿನಲ್ಲಿ ದುರ್ಭಾವನೆ.

OR/ಅಥವಾ

Explain the maxim 'ubi jus ibi remedium".

'ಎಲ್ಲಿ ಹಕ್ಕಿದೆಯೋ ಅಲ್ಲಿ ಪರಿಹಾರವಿದೆ'. ಈ ಸೂತ್ರವನ್ನು ವಿವರಿಸಿ.

P.T.O.

## UNIT – II

Q. No. 2. (a) "One who agrees to suffer the risk, has no remedy for that in tort" – Explain with exceptions. Marks : 15

"ಯಾರು ಅಪಾಯವನ್ನು ಅನುಭವಿಸಲು ಒಪ್ಪಿಗೆ ಕೊಡುತ್ತಾರೋ ಅವರಿಗೆ ಅಪಕೃತ್ಯದ ಕಾನೂನಿನಲ್ಲಿ ಪರಿಹಾರ ಸಿಗುವುದಿಲ್ಲ" – ಅಪವಾದಗಳೊಂದಿಗೆ ವಿವರಿಸಿ.

OR/ಅಥವಾ

Discuss with illustrations the liability of a master for the wrongful acts of his servant.

ಸೇವಕನ ಅಪಕೃತ್ಯಕ್ಕೆ ಒಡೆಯನ ಹೊಣೆಗಾರಿಕೆಯನ್ನು ಉದಾಹರಣೆಗಳೊಂದಿಗೆ ವಿವರಿಸಿರಿ.

(b) 'A' has given some amount and cheque to his friend, who was an employee of the bank for depositing in the A's amount. But the friend, instead of depositing in the A's amount, misappropriated it. Is the bank liable ? Marks : 5

'A' ಎಂಬ ವ್ಯಕ್ತಿ ಸ್ವಲ್ಪ ಹಣ ಮತ್ತು ಚೆಕ್‌ನ್ನು, ಬ್ಯಾಂಕ್‌ನಲ್ಲಿ ನೌಕರನಾಗಿದ್ದ ತನ್ನ ಸ್ನೇಹಿತನಿಗೆ, 'A' ಯ ಖಾತೆಯಲ್ಲಿ ಜಮಾ ಮಾಡಲು ನೀಡುತ್ತಾನೆ. ಆದರೆ ಸ್ನೇಹಿತನು ಅದನ್ನು ದುರ್ಬಳಕೆ ಮಾಡುತ್ತಾನೆ. ಇದಕ್ಕೆ ಬ್ಯಾಂಕ್ ಬಾಧ್ಯವಾಗುತ್ತದೆಯೆ ?

OR/ಅಥವಾ

Raju was an employee in a stone quarry. He was testing some explosives in the site, without wearing precautionary coverings, which were provided by the employer. Explosion took place and Raju gets seriously injured. Raju brings an action against employer to recover damages. Decide.

ರಾಜು ಒಂದು ಕಲ್ಲಿನ ಗಣಿಯಲ್ಲಿ ಕೆಲಸಗಾರನಾಗಿ ಕಾರ್ಯನಿರ್ವಹಿಸುತ್ತಿದ್ದ, ಸ್ಫೋಟಕಗಳನ್ನು ಪರೀಕ್ಷಿಸುವ ಸಂದರ್ಭದಲ್ಲಿ ಮಾಲಿಕ ಒದಗಿಸಿದ ಯಾವುದೇ ಮುನ್ನೆಚ್ಚರಿಕಾ ಕವಚಗಳನ್ನು ಧರಿಸದೆ, ಕಾರ್ಯ ನಿರ್ವಹಿಸುತ್ತಿದ್ದ, ಸ್ಫೋಟಕ ಸ್ಫೋಟಗೊಂಡು, ರಾಜುಗೆ ಗಂಭೀರ ಗಾಯಗಳಾಯಿತು, ಆದಕ್ಕೆ ರಾಜು ಮಾಲಿಕನ ವಿರುದ್ಧ ಪರಿಹಾರಕ್ಕಾಗಿ ದಾವೆ ಹೂಡಿದ್ದಾನೆ. ನಿರ್ಧರಿಸಿರಿ.

## UNIT – III

Q. No. 3. (a) Explain the concept of strict liability and state the exceptions. Marks : 15

ಕಟ್ಟುನಿಟ್ಟಿನ ತತ್ವವನ್ನು ವಿವರಿಸಿ ಮತ್ತು ಅದಕ್ಕಿರುವ ಅಪವಾದಗಳನ್ನು ತಿಳಿಸಿ.

OR/ಅಥವಾ

Comment on the general principles of contributory negligence and what is 'Doctrine of alternative danger' ?

ಸಹಾಯಕಾರಿ ನಿರ್ಲಕ್ಷ್ಯದ ಸಾಮಾನ್ಯ ತತ್ವಗಳನ್ನು ಕುರಿತು ಬರೆಯಿರಿ ಮತ್ತು 'ಪರ್ಯಾಯವಾದ ಅಪಾಯ' ಎಂದರೇನು ?

(b) The plaintiff resided in a house next to a Roman Catholic Church, of which the defendant was the priest and the Church bell was being rung at all hours of the day and night. The plaintiff filed a suit for nuisance. Decide. Marks : 5

ವಾದಿಯು ರೋಮನ್ ಕ್ಯಾಥೋಲಿಕ್ ಚರ್ಚಿನ ಪಕ್ಕದಲ್ಲಿ ವಾಸಿಸುತ್ತಿದ್ದನು. ಪ್ರತಿವಾದಿಯು ಆ ಚರ್ಚಿನ ಪಾದ್ರಿ. ಆ ಚರ್ಚಿನ ಗಂಟೆಯನ್ನು ಹಗಲು ಮತ್ತು ರಾತ್ರಿ ಎಲ್ಲಾ ವೇಳೆಯಲ್ಲಿಯೂ ಬಾರಿಸಲಾಗುತ್ತಿತ್ತು. ವಾದಿಯು ಉಪದ್ರವಕ್ಕಾಗಿ ದಾವೆ ಹೂಡುತ್ತಾನೆ. ನಿರ್ಧರಿಸಿ.

OR/ಅಥವಾ

What are the remedies available for nuisance ?

ಉಪದ್ರವಕ್ಕೆ ಸಿಗುವ ಪರಿಹಾರಗಳು ಯಾವುವು ?

## UNIT – IV

Q. No. 4. (a) What is defamation ? Explain the defences to an action for defamation. Marks : 15

ಮಾನಹಾನಿ ಎಂದರೇನು ? ಮಾನನಷ್ಟ ಮೊಕ್ಕದ್ದಮೆಗೆ ಸಂಬಂಧಿಸಿದ ಪ್ರತಿರಕ್ಷಣೆಗಳನ್ನು ವಿವರಿಸಿ.

OR/ಅಥವಾ

Discuss 'Assault' and 'Battery' with the help of decided cases.

ನಿರ್ಧರಿತ ಪ್ರಕರಣಗಳ ಸಹಾಯದಿಂದ 'ಹಲ್ಲೆ' ಮತ್ತು 'ಪ್ರಹಾರ'ಗಳ ಬಗ್ಗೆ ಚರ್ಚಿಸಿ.

(b) Short Notes :

ಲಘು ಟಿಪ್ಪಣಿ :

False Imprisonment. Marks : 5

ಮಿಥ್ಯ ಬಂಧೀಕರಣ.

OR/ಅಥವಾ

Malicious Prosecution.

ದುರ್ಭಾವಯುಕ್ತ ಅಭಿಯೋಗ.

## UNIT – V

Q. No. 5. (a) Explain the liability of doctors under Consumer Protection Act, with decided cases. Marks : 15

ಗ್ರಾಹಕರ ಸಂರಕ್ಷಣ ಅಧಿನಿಯಮದ ಅಡಿಯಲ್ಲಿ ವೈದ್ಯರ ಹೊಣೆಗಾರಿಕೆಯನ್ನು ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿ.

OR/ಅಥವಾ

Explain composition, appointment and jurisdiction of district forum.

ಜಿಲ್ಲಾ ವೇದಿಕೆಯ ರಚನೆ, ನೇಮಕ, ಮತ್ತು ಅಧಿಕಾರ ವ್ಯಾಪ್ತಿಯ ಕುರಿತು ವಿವರಿಸಿ.

(b) Short notes :

ಲಘು ಟಿಪ್ಪಣಿ :

Rights of consumers. Marks : 5

ಗ್ರಾಹಕರ ಹಕ್ಕುಗಳು.

OR/ಅಥವಾ

Monopolystic Trade Practice.

ಏಕಸ್ವಾಮ್ಯ ವ್ಯಾಪಾರ ಪದ್ಧತಿ.

0103/0522

**First Semester of Three Year LL.B./Fifth Sem. 5 Yr. B.A. LL.B., B.B.A. LL.B. Examination, June/July 2012**
**LAW OF TORTS AND CONSUMER LAW (Course – III)**

Duration : 3 Hours | Max. Marks : 100

**Instructions :** 1. Answer **all** Units.
ಎಲ್ಲಾ ಘಟಕಗಳಿಗೆ ಉತ್ತರಿಸತಕ್ಕದ್ದು.
2. Part (**a**) carries **15** marks and Part (**b**) carries **5** marks.
ಭಾಗ (**a**)ಕ್ಕೆ **15** ಅಂಕಗಳು ಮತ್ತು ಭಾಗ (**b**) ಕ್ಕೆ **5** ಅಂಕಗಳು.

## UNIT – I

Q. No. 1. (a) Define the term 'Tort' and discuss its essentials. Marks : 15
'ಅಪಕೃತ್ಯ' ಎಂಬ ಪದವನ್ನು ವ್ಯಾಖ್ಯಾನಿಸಿ ಮತ್ತು ಇದರ ಮುಖ್ಯಾಂಶಗಳನ್ನು ಚರ್ಚಿಸಿ.

OR/ಅಥವಾ

Distinguish between *Injuria Sine Damnum* and *Damnum sine Injuria* with the help of leading cases.
ನಷ್ಟವಿಲ್ಲದ ಹಾನಿ ಮತ್ತು ಹಾನಿಯಿಲ್ಲದ ನಷ್ಟ ಇವೆರಡಕ್ಕಿರುವ ವ್ಯತ್ಯಾಸಗಳನ್ನು ಪ್ರಮುಖ ಪ್ರಕರಣಗಳ ಸಹಾಯದಿಂದ ತಿಳಿಸಿರಿ.

(b) An MLA of Karnataka was wrongfully detained by the police while he was going to attend the Assembly session. He was not produced before the Magistrate within requisite period. Which legal right violated ? Advice him. Marks : 5
ಕರ್ನಾಟಕದ ಒಬ್ಬ ಎಂ.ಎಲ್.ಎ.ರವರನ್ನು ಪೋಲೀಸರು ಅವರು ವಿಧಾನ ಸಭೆಗೆ ಹೋಗುವಾಗ ಕಾನೂನು ಬಾಹಿರವಾಗಿ ಬಂದಿಸಿರುತ್ತಾರೆ. ಅವರನ್ನು ಮ್ಯಾಜಿಸ್ಟ್ರೇಟರವರ ಮುಂದೆ ನಿಗದಿತ ವೇಳೆಯೊಳಗೆ ಹಾಜರುಪಡಿಸಲಿಲ್ಲ. ಯಾವ ಕಾನೂನುಬದ್ಧ ಹಕ್ಕು ಚ್ಯುತಿಯಾಗಿದೆ ? ಅವರಿಗೆ ಸಲಹೆ ಕೊಡಿ.

OR/ಅಥವಾ

A school master Mr. Francis was removed from 'Royal Grammar School' unlawfully. Immediately Mr. Francis opened a rival school opposite to Royal Grammar School. All the students from Royal Grammar School joined a new school. Consequently Royal Grammar school was closed down and suffered huge loss. Now they want to take action against Mr. Franacis. Advice the Royal Grammar School authorities.
ಒಬ್ಬ ಶಿಕ್ಷಕನಾದ ಮಿ॥ ಫ್ರಾನ್ಸಿಸ್‌ರವರನ್ನು ಕಾನೂನುಬಾಹಿರವಾಗಿ 'ರಾಯಲ್ ಗ್ರಾಮರ್ ಸ್ಕೂಲ್'ನಿಂದ ತೆಗೆಯಲಾಯಿತು. ತಕ್ಷಣ ಮಿ॥ ಫ್ರಾನ್ಸಿಸ್‌ರವರು ರಾಯಲ್ ಗ್ರಾಮರ್ ಸ್ಕೂಲ್ ಎದುರೇ ಒಂದು ಪ್ರತಿಸ್ಪರ್ಧಿ ಸ್ಕೂಲನ್ನು ತೆರೆಯುತ್ತಾರೆ. ರಾಯಲ್ ಗ್ರಾಮರ್ ಸ್ಕೂಲ್‌ನಲ್ಲಿದ್ದ ಎಲ್ಲಾ ವಿದ್ಯಾರ್ಥಿಗಳು ಹೊಸ ಸ್ಕೂಲನ್ನು ಸೇರುತ್ತಾರೆ. ಅದರ ಪರಿಣಾಮ ರಾಯಲ್ ಗ್ರಾಮರ ಸ್ಕೂಲ್‌ನ್ನು ಮುಚ್ಚಲಾಯಿತು ಮತ್ತು ಬಹಳ ನಷ್ಟವನ್ನು ಅನುಭವಿಸುತ್ತಾರೆ. ಈಗ ಅವರು ಮಿ॥ ಫ್ರಾನ್ಸಿಸ್‌ರವರ ಮೇಲೆ ದಾವೆ ಹೂಡಲು ನಿರ್ಧರಿಸಿದ್ದಾರೆ. ರಾಯಲ್ ಗ್ರಾಮರ್ ಸ್ಕೂಲ್ ಅಧಿಕಾರಿಗಳಿಗೆ ಸಲಹೆ ಕೊಡಿ.

## UNIT – II

Q. No. 2. (a) How do you determine the Master-Servant relationship for the purpose of Vicarious Liability ? Marks

ಪ್ರತಿನಿಧಿ ರೂಪದ ಹೊಣೆಗಾರಿಕೆಯ ಸಲುವಾಗಿ ಮಾಲಿಕ-ಸೇವಕ ಸಂಬಂಧವನ್ನು ಹೇಗೆ ನಿರ್ಧರಿಸುವಿರಿ ?

OR/ಅಥವಾ

Explain the Justification of torts in the following cases.

ಅಪಕೃತ್ಯಕ್ಕೆ ಇರುವ ಕೆಳಕಂಡ ಸಮರ್ಥನೆಗಳನ್ನು ವಿವರಿಸಿ :

Act of God – ದೈವೀಕೃತ್ಯ

Inevitable accident – ಅನಿವಾರ್ಯ ದುರ್ಘಟನೆ

Statutory Authority – ಶಾಸನಬದ್ಧ ಅಧಿಕಾರ

(b) The defendant sent 'Nitric Acid' to a carrier without any warning. The carrier servant was injured by its escape while handling it. Is the defendant liable ? Decide. Mar

ಪ್ರತಿವಾದಿಯು ಯಾವ ಎಚ್ಚರಿಕೆಯನ್ನು ನೀಡದೆ ಸಾಗಣೆಕೆದಾರನಿಗೆ 'ನೈಟ್ರಿಕ್ ಆಮ್ಲ'ವನ್ನು ಕಳುಹಿಸುತ್ತಾನೆ. ಸಾಗಣೆದಾರನ ಸೇವಕನು ಅದನ್ನು ಸಾಗಿಸುವಾಗ ನೈಟ್ರಿಕ್ ಆಮ್ಲ ಹೊರಬಂದು ಗಾಯಗೊಂಡನು. ಪ್ರತಿವಾದಿಯು ಸೇವಕನಿಗಾದ ತೊಂದರೆಗೆ ಬಾಧ್ಯನೆ ? ತೀರ್ಮಾನಿಸಿ.

OR/ಅಥವಾ

Some military employees to the Government found firewood lying by the side of the river. They took it and used it for camp fire and fuel, under the impression that it belonged to the Government. The plaintiff, the real owner of the wood, brought an action against government. Is the Government liable ?

ಸರ್ಕಾರದ ಕೆಲವು ಮಿಲಿಟರಿ ನೌಕರರು ನದಿಯ ಪಕ್ಕದಲ್ಲಿ ಬಿದ್ದಿದ್ದ ಮರದ ದಿಮ್ಮಿಗಳನ್ನು ಕಂಡರು. ಇದು ಸರ್ಕಾರಕ್ಕೆ ಸೇರಿದ್ದೆಂದು ತಿಳಿದು ಅಡಿಗೆಗೆ ಮತ್ತು ಕ್ಯಾಂಪ್ ಫೈರ್‌ಗೆ ಉಪಯೋಗಿಸಿಕೊಂಡರು. ಆದರೆ ಅದರ ನಿಜವಾದ ಮಾಲಿಕ ವಾದಿಯು ತನ್ನ ಮರಗಳನ್ನು ಉಪಯೋಗಿಸಿಕೊಂಡದ್ದಕ್ಕೆ ಸರ್ಕಾರದ ವಿರುದ್ಧ ದಾವೆ ಹೂಡಿದನು. ಸರ್ಕಾರ ಹೊಣೆಯಾಗುತ್ತದೆಯೇ ?

## UNIT – III

Q. No. 3. (a) Explain 'Nuisance' with its essential characters and remedies available to it. Mar

'ಉಪದ್ರವ'ವನ್ನು ಅದರ ಮುಖ್ಯ ಲಕ್ಷಣಗಳನ್ನು ಮತ್ತು ಇದಕ್ಕೆ ಸಿಗುವ ಪರಿಹಾರಗಳ ಬಗ್ಗೆ ವಿವರಿಸಿ.

OR/ಅಥವಾ

"*In Jure non remota causa sed proxima spectator*". Explain the maxim with the help of leading cases.
'ಕಾನೂನು ಯಾವಾಗಲೂ ಅತಿ ಸಮೀಪದ ಘಟನೆಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುತ್ತದೆಯೇ ಹೊರತು ಅತಿ ದೂರದ ಘಟನೆಗಳನ್ನಲ್ಲ! ಈ ನಿಯಮವನ್ನು ಪ್ರಮುಖ ತೀರ್ಪುಗಳ ಸಹಾಯದಿಂದ ವಿವರಿಸಿ.

(b) A metropolitan borough, in pursuance of a formal resolution of its council, erected a stand on a highway which was a public nuisance. What is its liability ? Decide. Marks : 5
ಒಂದು ಮೆಟ್ರೋಪಾಲಿಟನ್ ಬರೋವು, ತನ್ನ ಮಂಡಳಿಯ ನಿರ್ಣಯಕ್ಕೆ ಅನುಗುಣವಾಗಿ ಹೆದ್ದಾರಿಯಲ್ಲಿ ಒಂದು ವೇದಿಕೆಯನ್ನು ರಚಿಸಿದರು. ಅದು ಸಾರ್ವಜನಿಕರಿಗೆ ಉಪದ್ರವವಾಗಿತ್ತು. ಅದರ ಹೊಣೆಗಾರಿಕೆ ಏನು ? ನಿರ್ಧರಿಸಿ.

OR/ಅಥವಾ

The plaintiff was standing on the highway in a road adjoining a cricket ground, when she was struck by a ball which had been hit out of the ground. Such an event was foreseeable and indeed balls had to the defendant's knowledge occasionally been hit out of the ground before. Decide whether the plaintiff can recover damages from the cricket club ?
ವಾದಿಯು ಒಂದು ರಸ್ತೆಯ ಪಕ್ಕದಲ್ಲಿದ್ದ ಕ್ರಿಕೆಟ್ ಆಟದ ಮೈದಾನದ ಬಳಿ ಹೆದ್ದಾರಿಯಲ್ಲಿ ನಿಂತಿದ್ದಾಗ ಆಟದ ಬಯಲಿನಿಂದ ಹೊಡೆದ ಚೆಂಡೊಂದು ಅವಳಿಗೆ ಹೊಡೆಯಿತು. ಇಂತಹ ಘಟನೆಯನ್ನು ಮುಂಗಾಣಬಹುದಾಗಿದ್ದು ಪ್ರತಿವಾದಿಗೆ ಗೊತ್ತಿದ್ದಂತೆ ಕೆಲವು ಬಾರಿ ಚೆಂಡು ಆಟದ ಮೈದಾನದಿಂದ ಹೊರಗೆ ಬೀಳುತ್ತಿತ್ತು. ವಾದಿಯು ಪ್ರತಿವಾದಿ ಕ್ರಿಕೆಟ್ ಕ್ಲಬ್‌ನಿಂದ ಪರಿಹಾರ ಪಡೆಯಲು ಸಾಧ್ಯವೇ ಎಂಬುದನ್ನು ತೀರ್ಮಾನಿಸಿ.

## UNIT – IV

Q. No. 4. (a) Explain "False imprisonment" and state the defences to an action of false imprisonment. Marks : 15
'ಮಿಥ್ಯ ಬಂದೀಕರಣ' ವನ್ನು ವಿವರಿಸಿ. ಮಿಥ್ಯ ಬಂದೀಕರಣದ ಕಾನೂನು ಕ್ರಮಕ್ಕೆ ಇರುವ ಪ್ರತಿವಾದವನ್ನು ತಿಳಿಸಿ.

OR/ಅಥವಾ

Explain the following :
ಕೆಳಗಿನವುಗಳನ್ನು ವಿವರಿಸಿ :

Parental Rights – ತಂದೆ ತಾಯಿಯ ಹಕ್ಕುಗಳು (ಪೋಷಕರ ಹಕ್ಕುಗಳು)

Conspiracy – ಒಳಸಂಚು

Libel – ಲೈಬಲ (ಲಿಖಿತ ಮಾನಹಾನಿ)

(b) 'A' makes a charge against 'B', where upon the magistrate orders that 'B' be taken into custody and determined until the matter can be investigated. 'B' sues 'A' for false imprisonment and claims damages. Decide. Mar

'ಎ'ಯು 'ಬಿ'ಯ ಮೇಲೆ ಆರೋಪ ಮಾಡುತ್ತಾನೆ. ಆದರಿಂದ ದಂಡಾಧೀಶರು (ನ್ಯಾಯಾಧೀಶರು) 'ಬಿ'ಯನ್ನು ದಸ್ತಗಿರಿ ಮಾಡಿ ಆ ಪ್ರಕರಣವು ವಿಚಾರಣೆ (ಪತ್ತೆಯಾಗುವ)ಯಾಗುವ ತನಕ ಬಂಧನದಲ್ಲಿಡಲು ಆದೇಶ ಮಾಡುತ್ತಾರೆ. 'ಬಿ'ಯು 'ಎ'ಯ ವಿರುದ್ಧ ಮಿಥ್ಯ ಬಂಧನವೆಂಬ ಆರೋಪದ ಮೇಲೆ ನಷ್ಟ ಪರಿಹಾರ ಪಡೆಯಲು ಮೊಕದ್ದಮೆ ಹೂಡುತ್ತಾನೆ. ನಿರ್ಧರಿಸಿ.

OR/ಅಥವಾ

'A' was a Chairman at a Parish meeting. 'B' was sitting seven places away on the same table proved unruly, where upon a resolution to eject him was passed. 'B' who was annoyed by this, said that he would rather pull 'A' out of the chair. Then he be ejected and moved towards 'A' with clinched fists. But he was stopped by the Church warden sitting next. Whether 'B' has committed any wrong ? Decide.

'ಎ'ಯು ಪ್ಯಾರೀಸ್ ಮೀಟಿಂಗ್‌ನ ಚೇರ್‌ಮನ್ ಆಗಿದ್ದನು. 'ಬಿ'ಯು ಮೀಟಿಂಗ್‌ನಲ್ಲಿ ಇದ್ದು ಅತ್ಯಂತ ಸಿಡುಕಿನ ಸ್ವಭಾವದವನಾಗಿದ್ದ ಕಾರಣ ಮೀಟಿಂಗ್‌ನಲ್ಲಿ ಅವನನ್ನು ಹೊರಹಾಕಬೇಕೆಂದು ಠರಾವು ಮಾಡಲಾಯಿತು. ಅದನ್ನು ಕೇಳುತ್ತಲೇ ಕೋಪಗೊಂಡ 'ಬಿ'ಯು ಸಿಟ್ಟಿನಿಂದ ನನ್ನನ್ನು ಹೊರಹಾಕುವ ಮೊದಲೇ 'ಎ'ಅನ್ನು ಕುರ್ಚಿಯಿಂದ ಕೆಳಗೆ ತಳ್ಳುತ್ತೇನೆಂದು ಹೇಳಿ ತನ್ನ ಮುಷ್ಠಿಯನು ಜೋರಿನಿಂದ ಅದುಮಿ ಅವನ ಕಡೆಗೆ ಮುನ್ನುಗ್ಗಿದನು. ಆದರೆ ಅವನ ಪಕ್ಕದಲ್ಲಿಯೇ ಕುಳಿತಿದ್ದ ಚರ್ಚ್ ವಾರ್ಡನನು ಅವನನ್ನು ಹಿಡಿದು ನಿಲ್ಲಿಸಿದನು, 'ಬಿ'ಯು ಅಪಕೃತ್ಯವನ್ನು ಎಸಗಿದನೇ ? ನಿರ್ಧರಿಸಿ.

## UNIT – V

Q. No. 5. (a) Who is consumer ? Explain the aims and objectives of Consumer Protection Act, 1986. Mar

ಗ್ರಾಹಕ ಎಂದರೆ ಯಾರು ? ಗ್ರಾಹಕ ಸಂರಕ್ಷಣಾ ಅಧಿನಿಯಮ 1986ರ ಧ್ಯೇಯ ಹಾಗೂ ಉದ್ದೇಶಗಳನ್ನು ವಿವರಿಸಿ.

OR/ಅಥವಾ

Explain the Jurisdiction of State Commission under Consumer Protection Act, 1986.

1986 ರ ಗ್ರಾಹಕ ಸಂರಕ್ಷಣಾ ಅಧಿನಿಯಮದನ್ವಯ, ರಾಜ್ಯ ಆಯೋಗದ ಅಧಿಕಾರ ವ್ಯಾಪ್ತಿಯನ್ನು ವಿವರಿಸಿ.

(b) Write short notes on : Ma

ಲಘು ಟಿಪ್ಪಣಿ ಬರೆಯಿರಿ :

Consumer Protection Council ಗ್ರಾಹಕ ಸಂರಕ್ಷಣಾ ಮಂಡಳಿ.

OR/ಅಥವಾ

Consumer Rights ಗ್ರಾಹಕನ ಹಕ್ಕುಗಳು.

---